ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ

ಸಂ:ಕೆಎಸ್‌ಐಸಿಪಿಎಸ್:ಸಿ.ಎನ್.ಸಿ.ಪಿ:ಸುತ್ತೋಲೆ/4/2016-17 ದಿನಾಂಕ:03.12.2019

## ಸುತ್ತೋಲೆ

ವಿಷಯ: ಹೊರ ರಾಜ್ಯಗಳ ಮಕ್ಕಳ ವರ್ಗಾವಣೆ ಕುರಿತು.

ಉಲ್ಲೇಖ: ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:18.11.2019 ರಂದು ನಡೆದ ಸಭೆಯ ಸಭಾ ನಡಾವಳಿ.

*******

ಉಲ್ಲೇಖಿತ ಸಭೆಯಲ್ಲಿ ಪ್ರಸ್ತುತ ಹೊರರಾಜ್ಯದ ಮಕ್ಕಳನ್ನು ಅವರ ಸ್ವಂತ ರಾಜ್ಯಗಳಿಗೆ ವರ್ಗಾವಣೆ ಮಾಡಲು ಸಂಬಂಧಿತ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಆದೇಶದೊಂದಿಗೆ ಕೇಂದ್ರ ಕಛೇರಿಗೆ ಅನುಮತಿಗಾಗಿ ಡಿಸಿಪಿಓ ರವರು ಪತ್ರ ಕಳುಹಿಸುತ್ತಿದ್ದಾರೆ, ಕೇಂದ್ರ ಕಛೇರಿಯಿಂದ ಸಂಬಂಧಿತ ರಾಜ್ಯಗಳ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಗೆ ಮಕ್ಕಳ ವರ್ಗಾವಣೆ ಬಗ್ಗೆ ಪತ್ರ ಬರೆದು ಸದರಿ ಪತ್ರದ ಪ್ರತಿಯನ್ನು ಡಿಸಿಪಿಓ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ. ನಿರ್ದೇಶಕರ ಸದರಿ ಪತ್ರ ಸಂಬಂಧಪಟ್ಟ ಸಿಸಿಐ ಸಂಸ್ಥೆಯವರಿಗೆ ತಲುಪುವವರೆಗೆ ಮಕ್ಕಳನ್ನು ಅದೇ ಸಂಸ್ಥೆಯಲ್ಲಿಯೇ ಉಳಿಸುತ್ತಿರುವುದರಿಂದ ಸಿಡಬ್ಲ್ಯೂಸಿ ರವರು ಮಕ್ಕಳ ವರ್ಗಾವಣೆಗೆ ಆದೇಶ ಹೊರಡಿಸಿದ ನಂತರ ಸಹ ಸುಮಾರು 4-5 ತಿಂಗಳು ಮಕ್ಕಳನ್ನು ಅವರ ಸ್ವಂತ ಸ್ಥಳಗಳಿಗೆ ಕಳುಹಿಸಲು ಹೆಚ್ಚಿನ ಸಮಯ ತಗಲುತ್ತಿರುವ ಬಗ್ಗೆ ಚರ್ಚಿಸಲಾಯಿತು.

ಹೊರ ರಾಜ್ಯದ ಮಕ್ಕಳ ವರ್ಗಾವಣೆಗೆ ಸಂಬಂಧಿಸಿದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಮೇಲಿನ ವಿಧಾನವು ಬಾಲನ್ಯಾಯ (ಪಾಲನೆ ಮತ್ತು ಪೋಷಣೆ) ಕಾಯ್ದೆ 2000, ತಿದ್ದುಪಡಿ ಕಾಯ್ದೆ 2006 ಹಾಗೂ ಕರ್ನಾಟಕ ಮಾದರಿ ನಿಯಮಗಳು 2010 ರನ್ವಯ ಅನುಸರಿಸುತ್ತಿರುವುದಾಗಿ ಸಭೆಯಲ್ಲಿ ಹಾಜರಿದ್ದ ನಿವೃತ್ತ ಅಧಿಕಾರಿಗಳು ತಿಳಿಸಿರುತ್ತಾರೆ.

ಬಾಲನ್ಯಾಯ (ಪಾಲನೆ ಮತ್ತು ಪೋಷಣೆ) ಕಾಯ್ದೆ 2015 ಕಾಯ್ದೆಯು ದಿನಾಂಕ:15.01.2016ರಿಂದ ಹಾಗೂ ಮತ್ತು ಬಾಲನ್ಯಾಯ ಕೇಂದ್ರ ಮಾದರಿ ನಿಯಮಗಳು 2016 ದಿನಾಂಕ:21.09.2016ರಿಂದ ಜಾರಿಗೆ ಬಂದಿರುತ್ತವೆ. ಬಾಲನ್ಯಾಯ (ಪಾಲನೆ ಮತ್ತು ಪೋಷಣೆ) ಕಾಯ್ದೆ 2015 ಕಾಯ್ದೆಯು ಜಾರಿಗೆ ಬಂದು ಸುಮಾರು 4 ವರ್ಷಗಳಾಗುತ್ತಿದ್ದು, ನೆರೆಹೊರೆಯ ಎಲ್ಲಾ ರಾಜ್ಯಗಳಲ್ಲಿಯೂ ಸದರಿ ಕಾಯ್ದೆಯ ಕಾನೂನಾತ್ಮಕ ಅಂಶಗಳು ಅನುಷ್ಠಾನಗೊಳ್ಳುತ್ತಿವೆ. ಆದರೆ ಕರ್ನಾಟಕ ರಾಜ್ಯದಲ್ಲಿ ಕಾಯ್ದೆಯು ಜಾರಿಗೆ ಬಂದು ಸುಮಾರು 4 ವರ್ಷಗಳಾಗುತ್ತಿದ್ದರೂ ಸಹ ಇನ್ನೂ ರದ್ದುಪಡಿಸಿದ ಹಳೆಯ ಕಾಯ್ದೆ ಹಾಗೂ ನಿಯಮಗಳನುಸಾರವಾಗಿಯೇ ಮಕ್ಕಳ ಅಂತರ ರಾಜ್ಯ ವರ್ಗಾವಣೆ ವಿಧಾನವನ್ನು ಅನುಸರಿಸುತ್ತಿರುವುದು ಗಂಭೀರವಾದ ವಿಷಯವಾಗಿರುತ್ತದೆ. ಅಲ್ಲದೇ ಇದರಿಂದ ಸುಮಾರು 4 ವರ್ಷಗಳ ಕಾಲ ಮಕ್ಕಳು ಸಿಡಬ್ಲ್ಯೂಸಿ ರವರು ಮಕ್ಕಳ ವರ್ಗಾವಣೆಗೆ ಆದೇಶ ಹೊರಡಿಸಿದ ನಂತರ ಸಹ ಸುಮಾರು 4-5 ತಿಂಗಳು ಅವರ ಸ್ವಂತ ಸ್ಥಳಗಳಿಗೆ ಹೋಗದೇ ಕರ್ನಾಟಕ ರಾಜ್ಯದ ಸರ್ಕಾರಿ ಗೃಹಗಳಲ್ಲಿಯೇ ಉಳಿದಿರುವುದು ದುರದೃಷ್ಟಕರ ವಿಷಯವಾಗಿದೆ. ಈ ವಿಷಯವನ್ನು ಮನಗಂಡು ಸದರಿ ಸಭೆಯಲ್ಲಿ ತೀರ್ಮಾನಿಸಿದಂತೆ ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015 & ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕೇಂದ್ರ ಮಾದರಿ ನಿಯಮಗಳು 2016ರ ಅಡಿಯಲ್ಲಿ ಮಕ್ಕಳ ವರ್ಗಾವಣೆ ಬಗ್ಗೆ ಕೆಳಕಂಡಂತೆ ಸುತ್ತೋಲೆಯನ್ನು ಹೊರಡಿಸಲಾಗುತ್ತಿದೆ.

Scanned by CamScanner

1. ಪ್ರಸ್ತುತ ಜಾರಿಯಲ್ಲಿರುವ ಬಾಲ ನ್ಯಾಯ ಕಾಯ್ದೆ 2015 ಹಾಗೂ ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕೇಂದ್ರ ಮಾದರಿ ನಿಯಮಗಳು 2016ರ ಅನ್ವಯ ಹೊರರಾಜ್ಯ ಮಕ್ಕಳ ವರ್ಗಾವಣೆಗಾಗಿ ರಾಜ್ಯ ಸರ್ಕಾರಕ್ಕೆ ಅಥವಾ **ಕೇಂದ್ರ ಕಛೇರಿಗೆ ಅನುಮತಿಗಾಗಿ ಇನ್ನು ಮುಂದೆ ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಕಳುಹಿಸುವ ಅಗತ್ಯವಿರುವುದಿಲ್ಲ.**

2. ಹೊರರಾಜ್ಯದ ಮಕ್ಕಳ ವರ್ಗಾವಣೆ ಬಗ್ಗೆ ಬಾಲನ್ಯಾಯ ಕಾಯ್ದೆ–2015, **ಸೆಕ್ಷನ್ 95(1) ರಲ್ಲಿ** "If during the inquiry it is found that a child hails from a place outside the jurisdiction, the Board or Committee, as the case may be, shall, if satisfied after due inquiry that it is in the best interest of the child and after due consultation with the Committee or the Board of the child's home district, order the transfer of the child, as soon as possible, to the said Committee or the Board, along with relevant documents and following such procedure as may be prescribed: Provided that such transfer can be made in case of a child in conflict with law, only after the inquiry has been completed and final order passed by the Board: Provided further that in case of inter-State transfer, the child shall be, if convenient, handed over to the Committee or the Board, as the case may be, of the home district of the child, or to the Committee or the Board in the capital city of the home State." ಎಂದು ನಮೂದಿಸಿದ್ದು, ಅದರನ್ವಯ ಸಂಬಂಧಿತ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿ/ಮಂಡಳಿಯೇ ವರ್ಗಾವಣೆ ಆದೇಶ ಹೊರಡಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

3. ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕೇಂದ್ರ ಮಾದರಿ ನಿಯಮಗಳು 2016, ನಿಯಮ 81(1)ರಲ್ಲಿ "During the inquiry, if it is found that the child hails from a place outside the jurisdiction of the Board or the Committee, the Board or the Committee shall order the transfer of the child and send a copy of the order stating the reasons for and circumstances of such transfer to the State Government and District Child Protection Unit. ಎಂದು ನಮೂದಿಸಿದ್ದು ಅದರನ್ವಯ ಮಗುವನ್ನು ವರ್ಗಾವಣೆಗೆ ಆದೇಶ ಮಾಡಲು ಕಾರಣಗಳನ್ನು ಒಳಗೊಂಡಿರುವ ವರ್ಗಾವಣೆ ಆದೇಶದ ಪ್ರತಿಯನ್ನು **ಸಂಬಂಧಿತ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿ/ಮಂಡಳಿಯು** ಕೇಂದ್ರ ಕಛೇರಿಗೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ **ಮಾಹಿತಿಗಾಗಿ** ಕಳುಹಿಸುವುದು.

4. ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕೇಂದ್ರ ಮಾದರಿ ನಿಯಮಗಳು 2016, ನಿಯಮ 81(2)ರಲ್ಲಿ

   "The District Child Protection Unit shall accordingly:

   (i) send the information of transfer to the appropriate Board or the Committee having jurisdiction over the area where the child is ordered to be transferred by the Board or Committee; and
   (ii) send a copy of the information to the Person-in-charge of the institution where the child is to be placed for care and protection at the time of the transfer order".
   ಎಂದು ನಮೂದಿಸಿದ್ದು ಅದರನ್ವಯ ಮಗುವನ್ನು ವರ್ಗಾವಣೆ ಮಾಡಲು ಅಗತ್ಯ ಕ್ರಮವಹಿಸುವುದು.

5. ಮಗುವಿನ ವರ್ಗಾವಣೆ ಆದೇಶದ ನಂತರ Escort ಗಾಗಿ ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 ಸೆಕ್ಷನ್ 95(2) ರಲ್ಲಿ

Scanned by CamScanner

"Once the decision to transfer is finalised, the Committee or Board, as the case may be, shall give an escort order to the Special Juvenile Police Unit to escort the child, within fifteen days of receiving such order:
Provided that a girl child shall be accompanied by a woman police officer:
Provided further that where a Special Juvenile Police Unit is not available, the Committee or Board, as the case may be, shall direct the institution where the child is temporarily staying or District Child Protection Unit, to provide an escort to accompany the child during travel" ಎಂದು ನಮೂದಿಸಿದ್ದು ಅದರನ್ವಯ ಮಕ್ಕಳ ಕಲ್ಯಾಣ ಸಮಿತಿಯ/ಮಂಡಳಿಯು SJPUಗೆ ನಮೂನೆ 45 ರಲ್ಲಿ Escort ಕಲ್ಪಿಸಲು ಆದೇಶಿಸುವುದು.

6. ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕೇಂದ್ರ ಮಾದರಿ ನಿಯಮಗಳು 2016, ನಿಯಮ 19 (16) ರಲ್ಲಿ

   "Where a child has to be sent or repatriated to another district or state or country the Committee shall direct the District Child Protection Unit to take necessary permission as may be required, such as approaching the Foreigners Regional Registration Offices and Ministry of External Affairs for a no-objection certificate, contacting the counterpart Committee, or any other voluntary organisation in the other district or state or country where the child is to be sent."

   ಅದರನ್ವಯ ಮಕ್ಕಳ ಕಲ್ಯಾಣ ಸಮಿತಿಯು ಹೊರದೇಶದ ಮಕ್ಕಳ ವರ್ಗಾವಣೆಗೆ ಸಂಬಂಧಿಸಿದಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ Foreigners Regional Registration Offices and Ministry of External Affairs ನೊಂದಿಗೆ ಸಂಪರ್ಕಿಸಿ ನಿರಾಕ್ಷೇಪಣೆ ಪತ್ರವನ್ನು (NOC) ಪಡೆಯಲು ಹಾಗೂ ವರ್ಗಾವಣೆಗೆ ಅಗತ್ಯವಿರುವ ಕ್ರಮಗಳನ್ನು ಅನುಸರಿಸಲು ಆದೇಶಿಸುವುದು.

7. ಬಾಲ ನ್ಯಾಯ ಕಾಯ್ದೆ 2015ರ ಸೆಕ್ಷನ್ 95ರ ಅಡಿಯಲ್ಲಿ ಮಕ್ಕಳ ವರ್ಗಾವಣೆಗೆ ಸಂಬಂಧಿಸಿದಂತೆ ಮಕ್ಕಳ ಕಲ್ಯಾಣ ಸಮಿತಿ/ಮಂಡಳಿಯಿಂದ ಆದೇಶ ಹೊರಡಿಸಲು ಬಾಲನ್ಯಾಯ ಕಾಯ್ದೆ-2015 ಮತ್ತು ಮಾದರಿ ನಿಯಮ 2016ರಲ್ಲಿ ಯಾವುದೇ ನಮೂನೆ ಇಲ್ಲದಿರುವುದರಿಂದ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿ/ಮಂಡಳಿಯು ಮಕ್ಕಳ ವರ್ಗಾವಣೆ ಆದೇಶ ಹೊರಡಿಸುವುದು.

8. ಈಗಾಗಲೇ ಹೊರರಾಜ್ಯದ ಮಕ್ಕಳ ವರ್ಗಾವಣೆಗಾಗಿ ಕೇಂದ್ರ ಕಛೇರಿಗೆ ಕಳುಹಿಸಿರುವ ಪ್ರಸ್ತಾವನೆಗಳಿಗೆ ಅನುಮತಿ ನಿರೀಕ್ಷಿಸದೆ ಎಲ್ಲಾ ಜಿಲ್ಲೆಯ ಮಕ್ಕಳ ರಕ್ಷಣಾಧಿಕಾರಿಗಳು ತಮ್ಮ ಹಂತದಲ್ಲಿ ಮೇಲೆ ನಮೂದಿಸಿರುವ ಕಲಂ (ಸೆಕ್ಷನ್) ಮತ್ತು ನಿಯಮಗಳ ಅನ್ವಯ ಕ್ರಮವಹಿಸಿ ವಿಳಂಬಕ್ಕೆ ಅವಕಾಶ ನೀಡದೆ ಮಕ್ಕಳನ್ನು ಅವರ ಸ್ವಂತ ರಾಜ್ಯಗಳಿಗೆ ವರ್ಗಾಯಿಸಲು ಕ್ರಮ ವಹಿಸುವುದು..

ಇನ್ನು ಮುಂದೆ ಮೇಲಿನ ಅಂಶಗಳೊಂದಿಗೆ ಬಾಲನ್ಯಾಯ ಕಾಯ್ದೆ-2015 ಮತ್ತು ಮಾದರಿ ನಿಯಮ 2016ರಲ್ಲಿ ಇರುವ ಎಲ್ಲಾ ಕಾನೂನಾತ್ಮಕ ಅಂಶಗಳನ್ನು ಗಮನದಲ್ಲಿರಿಸಿ ಅದರನ್ವಯ ಹೊರ ದೇಶ ಹಾಗೂ ಹೊರ ರಾಜ್ಯದ ಮಕ್ಕಳ ವರ್ಗಾವಣೆಗೆ ಕ್ರಮವಹಿಸತಕ್ಕದ್ದು.

ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.

Scanned by CamScanner

132

ಪ್ರತಿಯನ್ನು:

1. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು ಇವರ ಮಾಹಿತಿಗಾಗಿ
2. ಅಧ್ಯಕ್ಷರು/ಸದಸ್ಯರು, ಬಾಲ ನ್ಯಾಯ ಮಂಡಳಿ, ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ
3. ಅಧ್ಯಕ್ಷರು/ಸದಸ್ಯರು ಮಕ್ಕಳ ಕಲ್ಯಾಣ ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ.
4. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಮರಘ ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಅಧೀಕ್ಷಕರು, ಬಾಲಕರ/ಬಾಲಕಿಯರ/ಮನೋವಿಕಲ/ಬಾಲಮಂದಿರಗಳು, ವೀಕ್ಷಣಾಲಯಗಳು ಎಲ್ಲಾ 30 ಜಿಲ್ಲೆಗಳು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

Scanned by CamScanner

Annexure

**Transfer Order**

**U/S 95 (1) of JJ Act 2015 and Rule 81 (1) of JJ Model Rules 2016**

| |
|---|
| Case Number: |
| Child Name: |
| Presented under section: |
| Order Number: |
| PHOTO |

It is hereby ordered that the said child be transferred from the Residing CCI where the child is presently residing to the JJB/CWC of Home District with immediate effect (as per the section 95(1) of JJ Act 2015) for the reamaing period of placement.

a) A Child who is ordered to be transferred to the Home District within the State or to another State must be escorted to the receiving CWC/JJB institution.

All case papers and related documents must be photocopied. The originals must be delivered to the receiving CWC/JJB. Photo copies must be retained in the transferring institution.

b) All the money, valuables and personal belongings of the child shall be sent along with the child to the receiving CWC/JJB together with a statement of description and the value there of.

c)A medical examination of the child must be conducted before the transfer before 7 days of travel.

d) The receiving CWC/JJB will acknowledge the receipt of the child and the documents(in the space provided on this form) and return duplicate copy of this form.

| The Home where the Child is currently residing | | | The CWC/JJB to which the child is transferred to | | |
|---|---|---|---|---|---|
| 1. Address of Place of stay | | | 2. Address | | |
| City/Town/Village | Panchayat | Taluk | City/Town/Village | Panchayat | Taluk |
| District | State | PIN | District | State | PIN |

Reasons for transfer:

- Closer to family to aid social integration
- For adoption placement
- For Foster care Placement
- Better access to vocational Training Facilities
- Health Purposes
- Better access to Education
- Others (please specify)

Scanned by CamScanner

Inter-District and Inter-State Transfer order is being forwarded to SJPU/DCPU for making necessary Escort arrangements as per the procedure mentioned in Section 95 (2).

| ordered by: | | | | | |
|---|---|---|---|---|---|
| Chair Person CWC / | Principal Magistrate JJB | Member CWC/JJB | Member CWC/JJB | Member CWC/JJB | Member CWC/JJB |
| Date:<br>Place: | | | | | |

Acknoweledgement by Receiving CWC/JJB

| | |
|---|---|
| Received Child Name -------------- and documents related to the Child (Details as per annexure) on<br><br>Date:<br><br>Place: | Signature and Seal of Receiving CWC/JJB. |

Copy to:

1. Probation Officer/CWO of the place where the child will be sent.
2. District Child Protection Officer.

Scanned by CamScanner